# ಇಸ್ಸಾನ ಹಾಯ್ಕುಗಳು

ವಸಂತದ ಚಿಟ್ಟೆ
ತವಕದಲ್ಲಿದೆ
ಮಳೆಹನಿಗಳ ನಡುವೆ




ವಸಂತದ ಮಳೆ–
ಬೆಕ್ಕಿಗೆ ನರ್ತನ ಕಲಿಸುತ್ತಿದ್ದಾಳೆ
ಪುಟ್ಟ ಬಾಲೆ



ಭಿಕ್ಷಾಪಾತ್ರೆಯಲ್ಲಿ
ಐದು, ಹತ್ತು ಪೈಸೆ...
ಚಳಿಗಾಲದ ಮಳೆಯ ರಾತ್ರಿ

ಮಿಂಚುವಾಗ
ಹೇಗೆ ನಗುತ್ತಾನೆ
ಬುದ್ಧ

ಬಿತ್ತೊಂದು ಮಳೆಯ ಹನಿ
ತಲೆಯುಜ್ಜಿಕೊಳ್ಳುತ್ತಿರುವ
ಮರಗಪ್ಪೆ




ಮಿಂಚು–
ನಾಯಿಯ ಮುಖ ಮಾತ್ರ
ಮುಗ್ಧ



ಆ ಮೋಡ ಒಡೆಯಲು
ಮೂರು ದಿನ ಕಾದಿವೆ
ಮೂರು ಹನಿಗಳು

ಕೋಗಿಲೆ
ಮಳೆಯಲ್ಲಿ ತೊಯ್ದ
ಮುಂಜಾವಿನ ದನಿ



ಚಳಿಗಾಲದ ಈ ಮಳೆಯಲ್ಲಿ
ಗೂಬೆ ಕೂಡ ಗ್ರಾಸ
ಒಂದು ಹಾಯ್ಕುವಿಗೆ



ಚಿತ್ರಗಳು: ವೆಂಕಟ್ರಮಣ ಭಟ್